doc-17
T-P-2

Rega No M 1229 | 43rd Year | Sri 'Satyavadi' Mysore | 18—3—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಬುನೆ ಸಿಂಸ್ಕೇದಾರ್ ಎ. ಏ ಸುಬ್ಬರಾಯುರು [ಬಿಡಿ ಪ್ರತಿ3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಅಂಚೆ ಮತ್ತು ತಂತಿ ನೌಕರವರ್ಗದಿಂದ ಸತ್ಯಾಗಹವೇ ?

ಸಭಾತ್ಯಾಗ

ಭುವನೇಶ್ವರ 17 — ಧೂರ್ತಿಲನಿಂದ ಕದಲಿಸಲ್ಪಟ್ಟ ಜನಂ ಪ್ರತಿನಿಧಿಗಳು ಉಪವಾಸ ಹೂಡಿರುವ ಬಗ್ಗೆ ನಿಲುವಳಿ ಸೂಚನೆ ಮಂಡಿತವಾದ್ದು ತಿರಸ್ಕೃತ ಅದಕಾರಣ ನಿಧಾನ ಸಭೆಯಲ್ಲಿ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು

ಸತ್ಯಾಗ್ರಹದ ತೀವ್ರತೆ

ಬೆಳಗಾಂ 17 — ಗಡಿ ಸತ್ಯಾಗ್ರಹವನ್ನು ತೀವ್ರಗೊಳಿಸಲು ಮಹಾರಾಷ್ಟ್ರ ಏಕೀಕರಣ ಸಮಿತಿ ನಿರ್ಧರಿಸಿದೆ

ಮಧ್ಯವರ್ತಿ ಅಂದಾಜುಪಟ್ಟಿ

ಕರಾಚಿ 17— ಪಾಕಿಸ್ತಾನಕ್ಕೆ ಏಪ್ರಿಲ್, ಮೇ ಜೂನ್ ಮೂರು ತಿಂಗಳ ಮಧ್ಯವರ್ತಿ ಬಡ್ಡಿಟ್ಟು ತಾ|| 28 ರಂದು ರಾಷ್ಟ್ರೀಯ ರೇಡಿಯೋ ಮುಖಾಂತರ ಪ್ರಸಾರ ಮಾಡಲ್ಪಡುವುದು.

ಸೇನೆ ಆಪೇಕ್ಷೆ

ಕಲ್ಕತ್ತಾ 17 — ಪಾಕಿಸ್ತಾನದ ಸಂದರ್ಶನೆ ಕೊಡಲ್ಲು ಮುರ್ಮಿದಾಬಾದು ಗಡಿಯಲ್ಲಿ ಸೇನೆಯ ಸೇವೆಯನ್ನು ಕೋರಲಾಗಿದೆಯೆಂದು ಪಶ್ಚಿಮ ಬಂಗಾಳ ಮುಖ್ಯ ಮಂತ್ರಿ ಡಾ|| ಬಿ ಸಿ ರಾಯರು ವಿಧಾನ ಸಭೆಯಲ್ಲಿ ತಿಳಿಸಿದರು

ವೈರೇಷ್ ರಜನೆ

ಬೆಂಗಳೂರು 17 — ಕೋಲಾರದ ಗಣಿಯನ್ನು ಕಾರ್ಪೊರೇಷನ್ ಪರಿಶೀಲಿಸುವ ಬಗ್ಗೆ ಏನಂ ಕಾರ್ಯಗತಗೊಳಿಸಬೇಕೆಂಬ ದಾಗಿ ಮುಖ್ಯಮಂತ್ರಿ ಶ್ರೀ ಜತ್ತಿಯವರು ವಿಧಾನಸಭೆಗೆ ತಿಳಿಸಿದರು.

ನವ ದೆಹಲಿ 17 — ಅಂಚೆ ಮತ್ತು ತಂತಿ ನೌಕರ ವರ್ಗ, ಎರಡನೆ ವೇತನ ಸಮಿತಿ ವರದಿ ಪ್ರಕಟಿಸಲು ವಿತ್ತ ಜಾರಿಗೆ ತರಲು ಮತ್ತು ಸರ್ಕಾರದ ಕೆಲಸಗಾರರ ನಡವಳಿಕೆ ನಿಯಮದಲ್ಲಿ ಕೆಲವನ್ನು ವಾಪಸು ಪಡೆಯುವಂತೆ ಒತ್ತಾಯಿಸಲು ಬಂಧನಕ್ಕೊಳಗಾಗಿರುವ ಪ್ರಮುಖ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಸಂಪರ್ಕ ಶಾಖೆ ಮಂತ್ರಿ ಶ್ರೀ ರಾಜಬಹದ್ದೂರರು ಉತ್ತರವಿತ್ತು ಪತ್ರಿಕೆಗಳ ವರದಿ ಮೂಲಕ ಗೊತ್ತಾಗಿದೆ, ನಿಯಮ ಭಂಗ ಮಾಡಿದರೆ ಆ ಕಾಲದಲ್ಲಿ ಸೂಕ್ತಕ್ರಮ ಕೈಗೊಳ್ಳಲಾಗುವುದು ಎಂದರು.

ರಾಜೀನಾಮೆ

ಮಂಗಳೂರು 16 — ಪೌರಸಭೆಯ ಸದಸ್ಯರಾದ ಶ್ರೀ ಜೆ ಬಿ ಡಯಾಸರು ಕಾಂಗ್ರೆಸ್ಸು ವಿಷ್ಕಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಸೀಮೆಯೆಣ್ಣೆ ನಾಶ

ಕಾರ್ವಾರ 16 — ನಾಡು ದೋಣಿಯೊಂದು ಮುಳುಗಿದ್ದರಿಂದ ಅದರಲ್ಲಿ ಇದ್ದ ಸೂರಾರು ಟಿನ್‌ಗಳ ಸೀಮೆ ಎಣ್ಣೆ ನಾಶವಾಗಿದೆ

ಶಿಲಾಸ್ತಿಭಾರ

ಮೈಸೂರು 17 — ಮೈಸೂರಿನ ರಾಜ್ಯಪಾಲರು ಈ ದಿನ ಭಾರತೀಯ ವೈದ್ಯ ಕಾಲೇಜಿನ ವತ್ತು ಮಕ್ಕಳ ವಾರ್ಡಿನ ಶಿಲಾಸ್ತಿಭಾರ ಸಮಾರಂಭವನ್ನು ಆಯುರ್ವೇದ ಆಸ್ಪತ್ರೆ ಪ್ರದೇಶದಲ್ಲಿ ನೆರವೇರಿಸಿ, ವಿಜ್ಞಾನದ ಆಧಾರದ ಮೇಲೆ ಆಯುರ್ವೇದ ಬೋಧಿಸಬೇಕೆಂದು ಒತ್ತಿ ಹೇಳಿದರು

ಯೋಜನೆ ಪ್ರಚಾರ ಬಗ್ಗೆ ಕಾರ್ಯಕ್ರಮ

ನಮ್ಮ ರಾಷ್ಟ್ರದ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮದ ಅಂಗವಾಗಿ 19-ನೆಯ ಗುರುವಾರ ಸಂಜೆ 6 ಗಂಟೆಗೆ ಮೈಸೂರು ನಗರದ ರಂಗಾಚಾರ್ಲು ಮಂದಿರದಲ್ಲಿ ಯೋಜನಾ ಪ್ರಚಾರ ಸಪ್ತಾಹವನ್ನು ಏರ್ಪಡಿಸಲಾಗಿದೆ ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಮುಂಸಭಾಧ್ಯಕ್ಷರಾದ ಶ್ರೀ ಬಿ ಎಸ್. ಕೆಂಗೇಗೌಡರು ವಹಿಸಲು ದಯವಿಟ್ಟು ಒಪ್ಪಿದ್ದಾರೆ

ಶೃಂಗೇರಿಗೆ ಪರಿಹಾರ

ಬೆಂಗಳೂರು — ಶೃಂಗೇರಿ ಮಠದ ಇನಾಂಗಳನ್ನು ಸರ್ಕಾರ ವಹಿಸಿಕೊಂಡು, ಜಗದ್ಗುರುಗಳ ಮಠಕ್ಕೆ ವರ್ಷಕ್ಕೆ ರೂ 1 ವರೆ ಲಕ್ಷ ಕೊಡುವುದೆಂದು ತಿಳಿದುಬಂದಿದೆ

ಮಂತ್ರಿಗಳಿಗೆ ಬಿಡಿ

ನಾಗ್ಪುರ ಕಾಂಗ್ರೆಸಿನ ಭೂಸುಧಾರಣೆ ಸಂಬಂಧ ನಿರ್ಣಯಗಳನ್ನು ಶೀಘ್ರದಲ್ಲಿ ಜಾರಿಗೆ ತರುವ ವಿಷಯವನ್ನು ರಾಜ್ಯದ ಮಂತ್ರಿಗಳಿಗೇ ಬಿಡುವುದು ಸೂಕ್ತವೆಂದು ಕಾಂಗ್ರೆಸು ಕಾರ್ಯಕಾರಿ ಸಮಿತಿ ಅಭಿಪ್ರಾಯಪಟ್ಟಿದೆ ಎಂದು ನವದೆಹಲಿ ವರದಿ.

ತೀರ್ಮಾನವಾಗಿದೆ

ನವ ದೆಹಲಿ 17 — ಇಟಲಿಯು ವಿರುದ್ಧ ಭಾರತದ ಯುದ್ಧ ಬೇಡಿಕೆಗಳು ತೀರ್ಮಾನವಾಗಿರುವದೆಂದು ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

ವಿವಿಧ ವರ್ತಮಾನ

ನವ ದೆಹಲಿ 17 — ಪಾಕಿಸ್ತಾನಕ್ಕೆ ಬೇರುಬಾರಿ ವರ್ಗಾವಣೆ ಆಗುವದನ್ನು ಪಾರ್ಲಿಮೆಂಟಿನ 23 ಸದಸ್ಯರು ಮತ್ತು ಶ್ರೀ ಎಸ್. ಜಟರ್ಜಿಯವರು ವಿರೋಧಿಸಿ ಹೇಳಿಕೆಯಿತ್ತಿದ್ದಾರೆ.

ವಾಷಿಂಗ್ಟನ್ 17 — ಭಾರತ ವಿದೇಶಿ ವಿನಿಮಯ ತೊಂದರೆ ಪರಿಹರಿಸಲು 5 ರಾಷ್ಟ್ರಗಳು ವಿಶ್ವಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ಸೂಚನೆಯಾಗಿ ಮಾತುಕತೆಗಳನ್ನು ಪ್ರಾರಂಭಿಸಿದವು ಮುಂದಿನ 12 ತಿಂಗಳುಗಳಿಗೆ 300 ಮಿಲಿಯ ಅಂತರಾಷ್ಟ್ರೀಯ ಸಾಲ ಭಾರತಕ್ಕೆ ದೊರೆಯುಬಹುದೆಂದು ರಾಜತಾಂತ್ರಿಕ ವಲಯುಗಳಿಂದ ಗೊತ್ತಾಗಿದೆ.

ನ್ಯೂಯಾರ್ಕ್ 17 — ಬೇಸರ ಕೆಲಸ ಮುಂತಾದುವುಗಳಿಂದ ನಂಗಳನ್ನ ಸೆಡಿಲಪಡಿಸಿಕೊಳ್ಳಲು ಕಳೆದ ವರ್ಷ ೨, ಮೇರಿಕಾದವರು 22ವರೆ ಕೋಟಿ ಡಾಲರಷ್ಟು ವೆಚ್ಚ ಮಾಡಿರುವರು

ವಿವಾಹಮಹೋತ್ಸವ

ಚಿ|| ಸೌ|| ಮೈಥಿಲಿ (ಶ್ರೀ ಹೆಮ್ಮಿಗೆ ವೇದಾಂತ ರಂಗಾಚಾರ್ಯರ ಮಗಳು) ಮತ್ತು ಚಿ|| ರಾ|| ನಾರಾಯಣ ಎಂ.ಎ. (ಪೋಸ್ಟ್‌ಮಾಸ್ಟರ್ ಶ್ರೀನಿವಾಸಯ್ಯಂಗಾರ್ಯರ ಮಗ) ಇವರ ವಿವಾಹಮಹೋತ್ಸವವು ನೆನ್ನೇ ದಿವಸ ಶ್ರೀ ಚಂದ್ರಗಿರಿ ಚಲುವರಾಯಸ್ವಾಮಿ ಛತ್ರದಲ್ಲಿ ವೈಭವವಾಗಿ ನೆರವೇರಿತು ಈ ವಿವಾಹ ಸಂದರ್ಭವಾಗಿ ವಧುವಿನ ಸಹೋದರರಾದ ಮುನಿಸಿಪಲ್ ಕೌನ್ಸಿಲರ್ ಶ್ರೀ ವೇದಾಂತ ಹೆಮ್ಮಿಗೆಯವರು ನಿನ್ನೇ ದಿವಸ ಭೋಜನ ಕೂಟವನ್ನು ಏರ್ಪಡಿಸಿದ್ದರು.

ನಾಳೆಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಸಕೃಷ್ಣ ಜೋಯಿಸರಿಂದ

19 ದಶಮಿ ಪುನರ್ವಸು

ಮಾಸ್ಕೋದಲ್ಲಿ ಭಾರತೀಯ ಸಂಗೀತ ಕಚೇರಿ !

ಮಾಸ್ಕೊ 6— ನಲವತ್ತು ದೇಶಗಳಿಂದ ನಾಟಕವೃಂದಗಳೂ, ಸಂಗೀತ ಕೂಟಗಳೂ, ಸಂಗೀತಕಲಾವಿದರೂ ಬಂದು ಈ ವರ್ಷ ಮಾಸ್ಕೋದಲ್ಲಿ ಪ್ರದರ್ಶನಗಳನ್ನು ನೀಡುವರು ; ಭಾರತದೇಶ, ಪಾಕಿಸ್ತಾನ, ಚೀನಾದೇಶಗಳೂ ಸಹಕರಿಸಲಿವೆ ; ಮಾರ್ಚ್ ತಿಂಗಳಲ್ಲಿ ' ನಿರ್ಗಲ್ಲ ಮೇಲಿನ ಉತ್ಸವ ಕಂಡವು ' ಅಮೇರಿಕಾದಿಂದ ಬರಲಿದೆ.

ಭಾರತದೇಶದ ಪಪಾಡಗಳು — ಪುರಾತನ ಪಾಂಡುಲಿಪಿ

' ಭಾರತದೇಶದ ಪವಾಡಗಳು ' ಎಂಬ ಪುರಾತನ ಪಾಂಡುಲಿಪಿಯನ್ನು ಸೋವಿಯೆಟ್ ವಿಜ್ಞಾನಶಾಸ್ತ್ರ, ಪರಿಷತ್ತಿನ ಪ್ರಾಚ್ಯಾಧ್ಯಯನ ವಿದ್ಯಾಲಯವು ಪ್ರಕಟಣೆಗೆ ಸಿದ್ಧಗೊಳಿಸಿದೆ ; ಅರಬ್ ಭೌಗೋಳಿಕ ಸಾಹಿತ್ಯದ ಅತ್ಯಂತ ಪ್ರಾಚೀನ ಪಾಂಡುಲಿಪಿಗಳಲ್ಲೊಂದಾದ ಈ ಕೃತಿಯನ್ನು ಬುಜುರ್ಗ ಇಬ್ನ ಷಹ್ರಿಯಾರ್ ಬರೆದರು ; ಈ ಕೃತಿಯ ವಿಷಯವಸ್ತು ಪಾಂಡುಲಿಪಿಯು ಉಳಿದಿದ್ದು, ಮೂಲ ಅರಬ್ ಕೃತಿಯನ್ನು ಈಗ ರಷ್ಯಭಾಷೆಗೆ ಅನುವಾದಿಸಲಾಗಿದೆ ; ಹತ್ತನೆಯ ಶತಮಾನದ ದ್ವಿತೀಯಾರ್ಧದಲ್ಲಿ ಬರೆಯಲಾದ ಈ ಕೃತಿಯಲ್ಲಿ, ಐತಿಹಾಸಿಕ, ಭೌಗೋಳಿಕ ಸಮಾಚಾರ ಮಾತ್ರವಷ್ಟೇ ಇಲ್ಲದೆ, ದಕ್ಷಿಣ ಮೆಸೊಪೊಟೋಮಿಯಾ, ಪಶ್ಚಿಮ ಪರ್ಶಿಯಾ ದೇವುಗಳಲ್ಲಿನ ಜನಜೀವನ ಬಗ್ಗೆ ಅಮೂಲ್ಯ ವಾಸ್ತವಾಂಶಗಳನ್ನೂ ಸಹ ನೀಡಲಾಗಿದೆ.

ಪುರಾತನ ಮಾನವ ಶಿಲಾಶಿಲ್ಪಿಗಳು

ಅಲ್ಮಾಅತಾ— ಮಧ್ಯ ಕಜಾಕಸ್ತಾನದ ಉಲುತಾವ್ ಜಿಲ್ಲೆಯಲ್ಲಿ, ಕರಾಗಂಡಾದಿಂದ 430 ಮೈಲಿ ದೂರದ ಸ್ಥಳದಲ್ಲಿ, ಮಾನವ ಶಿಲಾಶಿಲ್ಪಗಳು ಮೂವತ್ತು ದೊರೆತಿವೆ ; ಅಂಜುವರೆ ಅಡಿ ಎತ್ತರ ಸ್ಫಟಿಕ ಶಿಲೆಗಳ ಮೇಲೆ ಕೆತ್ತಲಾಗಿರುವ ಈ ಸುಂದರ ವಿಗ್ರಹವನ್ನು ಸೋವಿಯಾತ್ ಪುರಾವಸ್ತು ಸಂಶೋಧಕರು ಕಂಡು ಹಿಡಿದಿದ್ದಾರೆ ; ಈ ಶಿಲ್ಪಗಳು 6 ರಿಂದ 15 ನೆಯ ಶತಮಾನಗಳಷ್ಟು ಹಳೆಯವೆಂದೂ, ಇವು ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಹಳೆಯ ಹಳೆಯ ಗಡ್ಡಗಾಡುಜನರ ಗೋರಿಗಳ ಕಲ್ಲುಗಳಾಗಿದ್ದವೆಂದೂ ಸ್ಥಾಪಿಸಲಾಗಿದೆ.

ಪುರಸಭಾಧ್ಯಕ್ಷರ ಸೂಚನೆ

ಇದುವರೆವಿಗೆ ವಿದ್ಯುಚ್ಛಕ್ತಿ ದೀಪಗಳು ಹತ್ತು ಘಂಟೆಗಳ ಕಾಲ ಉರಿಯುತ್ತಿರುವುದೂ, ಫೆಬ್ರವರಿ ಒಂಭತ್ತನೆ ತಾರೀಖಿನ ದಿವಸದಿಂದೀಚೆಗೆ ಜಿಳಿಗ್ಗೆ ನಾಲ್ಕು ಘಂಟೆಗೆ ಆರಿಸಲ್ಪಡುತ್ತಿದ್ದುದನ್ನು ಐದು ಘಂಟೆಗೆ ಮಾಡಿದುದೂ ಮಹಾಜನರಿಗೆ ತಿಳಿದ ವಿಷಯವಾಗಿದೆ ; ಈ ವಿಷಯದಲ್ಲೂ ಸಹ ನಾಗರೀಕರಿಗೆ ಪೂರ್ಣ ಪರಿಹಾರ ಕೊಡಲಿಲ್ಲವೆಂಬುದನ್ನು ಪುರಸಭೆಯು ಮನಗೊಂಡು 14–3–59 ನೇ ತಾರೀಖು ಶನಿವಾರ ನಡೆದ ಅಧಿವೇಶನದಲ್ಲಿ, ದೀಪಗಳನ್ನು 12 ಘಂಟೆಗಳ ಕಾಲ ಉರಿಸುವುದು ಅವಶ್ಯಕವೆಂಬ ನಿರ್ಧಾರಿಸಿ ಆ ಬಗ್ಗೆ ವಿದ್ಯುಚ್ಛಕ್ತಿ ಇಲಾಖೆಗೆ ಬರೆಯಲಾಗಿರೆಯೆಂಬಂಶವನ್ನು ಮಹಾಜನರ ಅವಗಾಹನೆಗೆ ಈ ಮೂಲಕ ತಂದಿದೆ.

ಬಿ. ಎಸ್. ಕೆಂಗೇಗೌಡ, ಪುರಸಭಾಧ್ಯಕ್ಷರು, ಮೈಸೂರು.

SHAKTI SUDHA

A Superb Tonic

ವುಡ್‌ಲಾಂಡ್ಸ್

13–3–59 ರಿಂದ
ಅಮೋಘ ಆರಂಭ

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ — ನೋಡಲು ಮರೆಯಬೇಡಿ

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ದಿಗ್ದರ್ಶನ : ರಾಜ್ ಖೋಸ್ಲ ಸಂಗೀತ : ಎಸ್. ಡಿ ಬರ್ಮನ್

ಅಪೆರಾ—

14–3–59 ರಿಂದ
ಅಮೋಘ ತೆಲುಗು ಚಿತ್ರ
ಪ್ರತಿದಿನ 3 ಆಟಗಳು

ಸಂತೋಷ

ಪಾತ್ರ— ಎನ್ ಟಿ ರಾಮರಾವ್, ಅಂಜಲಿ, ನಾಗೇಂದ್ರರಾವ್, ರೇಲಂಗಿ

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
2 insertions and above	1-25
Contract above 100 inches	1-00
500	0-75

Column length 12½ inches ; width 2 inches; 4 columns to a page.
The decision of the management is final in all matters.

Manager " Satyavadi ", Chamarajpuram, Mysore

Edited, Printed & Published by Dharma Prachara Nirata M. S. Krishna Rao, at the Satyavadi Press Chamarajapuram, Mysore.